ಮಾಡಿದ್ದೀರಿ, ಅಂತಹ ಕಡೆ ಬಸ್ಸುಗಳನ್ನು ನಿಲ್ಲಿಸುವಂತೆ ತಮ್ಮ ಸಿಬ್ಬಂದಿಗಳಿಗೆ ಸೂಚನೆ ನೀಡಬೇಕು. ಮತ್ತು ಅಲ್ಲಿ ಶೌಚಾಲಯದ ವ್ಯವಸ್ಥೆ ಮಾಡಿ ಶುಚಿಯಾದ ಫಲಹಾರ ಮಂದಿರವನ್ನು ಕೂಡ ವ್ಯವಸ್ಥೆ ಮಾಡತಕ್ಕಂಥ ಕ್ರಮವನ್ನು ಕೈಗೊಳ್ಳಬೇಕು.

ಈಗ ರಸ್ತೆಯ ಮಧ್ಯದಲ್ಲಿ ಬಸ್ಸನ್ನು ನಿಲ್ಲಿಸುತ್ತಿದ್ದಾರೆ. ಬಸ್ ನಿಲ್ದಾಣಕ್ಕೆ ಯಾರೂ ಹೋಗುವುದಿಲ್ಲ. ಅವರು ತಮ್ಮ ಸ್ವಇಚ್ಛೆಯಂತೆ ರಸ್ತೆಯ ಮಧ್ಯದಲ್ಲಿ ನಿಲ್ಲಿಸುತ್ತಿರುವುದನ್ನು ತಪ್ಪಿಸಬೇಕು. ಅನೇಕ ಪ್ರಯಾಣಿಕರು ಅಡ್ಡ ಬರತಕ್ಕ ಬಸ್ಸುಗಳನ್ನು ಗಮನಿಸದೆ ಬಸ್ ಹತ್ತುವಲ್ಲಿ ಪ್ರಯತ್ನ ಮಾಡುತ್ತಾರೆ. ಅಂಥ ಸಂದರ್ಭದಲ್ಲಿ ಅನೇಕ ಅಪಘಾತಗಳಿಗೆ ಒಳಗಾಗುತ್ತಾರೆ. ಆದ್ದರಿಂದ ಮಾನ್ಯ ಮಂತ್ರಿಗಳು ಈ ಮೈಸೂರು ಮತ್ತು ಬೆಂಗಳೂರು ಮಧ್ಯದಲ್ಲಿ ವ್ಯವಸ್ಥಿತವಾದ ಬಸ್ ನಿಲ್ದಾಣಗಳನ್ನು ಹಾಗೂ ಸರಿಯಾದ ಶೌಚಾಲಯ ಮತ್ತು ಫಲಹಾರ ಮಂದಿರದ ವ್ಯವಸ್ಥೆಯನ್ನೂ ಮಾಡುವುದಕ್ಕೆ ಕ್ರಮ ಕೈಗೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೋರುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ : ಮಾನ್ಯ ಅಧ್ಯಕ್ಷರೇ, ಮೈಸೂರು-ಬೆಂಗಳೂರಿಗೆ 181 ಬಸ್ಸುಗಳು ಓಡಾಡುತ್ತಿದ್ದು, ಅವುಗಳಲ್ಲಿ 68 ತಡೆರಹಿತ ಬಸ್ಸುಗಳು, 67 ವೇಗಧೂತ ಬಸ್ಸುಗಳು, 26 ಅರೆ ಸುಖಾಸೀನ ಬಸ್ಸುಗಳು ಮತ್ತು 20 ಸುಖಾಸೀನ ಬಸ್ಸುಗಳು. ರಾಮನಗರ, ಮದ್ದೂರು ಮಂಡ್ಯ ಈ ಮೂರು ಸ್ಥಳಗಳಲ್ಲಿ ನಮ್ಮ ಬಸ್ಸ್ಟಾಂಡ್ ಇದೆ. ಇದರ ಜೊತೆಗೆ ಮಹಿಳೆಯರ ಮತ್ತು ಪುರುಷರ ಶೌಚಾಲಯಗಳು, ಕುಡಿಯುವ ನೀರಿನ ವ್ಯವಸ್ಥೆ, ಫಲಹಾರ ಮಂದಿರಗಳು, ಪುಸ್ತಕ ಮಳಿಗೆ ಈ ಎಲ್ಲಾ ವ್ಯವಸ್ಥೆಯನ್ನು ಒದಗಿಸಲಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ, ಮದ್ದೂರು ಎನ್ನತಕ್ಕಂಥ ಊರು ಇಲ್ಲ ನೀವು ಇವುಗಳನ್ನೆಲ್ಲಾ ಎಲ್ಲಿ ಮಾಡಿದ್ದೀರೋ ನಮಗಂತೂ ಗೊತ್ತಿಲ್ಲ.

ಶ್ರೀ ಭೀಮಣ್ಣ ಖಂಡ್ರೆ : ಮಾನ್ಯ ಅಧ್ಯಕ್ಷರೇ, ಶ್ರೀರಂಗಪಟ್ಟಣ ಮತ್ತು ಚನ್ನಪಟ್ಟಣದಲ್ಲಿ ಟೆಂಪೊರರಿಯಾಗಿ ಮಾಡಿದ್ದೇವೆ. ಮಾನ್ಯ ಸದಸ್ಯರ ಕಂಪ್ಲೆಂಟ್ ಏನು ಇದೆ ಎಂದರೆ ಬಸ್ ಡ್ರೈವರ್ಗಳು ಬಸ್ಸುಗಳನ್ನು ಬಸ್ ನಿಲ್ದಾಣದಲ್ಲಿ ನಿಲ್ಲಿಸುವುದಕ್ಕೆ ಬದಲಾಗಿ ಬೇರೆ ಕಡೆಗಳಲ್ಲಿ ತಮ್ಮ ಸ್ವಾರ್ಥಕ್ಕಾಗಿ ನಿಲ್ಲಿಸುತ್ತಿದ್ದಾರೆ ಎಂದು, ಅವರು ಖಾಸಗೀ ಹೋಟೆಲ್ಗಳ ಮುಂದೆ ಬಸ್ಸುಗಳನ್ನು ನಿಲ್ಲಿಸುತ್ತಾರೆ ಎಂಬ ಕಂಪ್ಲೆಂಟ್ ಬಂದನಂತರ ನಾವು ಆಕ್ಷನ್ ತೆಗೆದುಕೊಂಡಿದ್ದೇವೆ. 250 ಡ್ರೈವರುಗಳಲ್ಲಿ ನಾವು ಪೆನಾಲ್ಟಿ ಎಂದು 50 ರೂಪಾಯಿಗಳಿಂದ 200 ರೂಪಾಯಿಗಳ ವರೆಗೆ ವಸೂಲಿ ಮಾಡಿದ್ದೇವೆ. ಯಾರು ಬಸ್ಸನ್ನು ಬಸ್ಟಾಂಡಿನಲ್ಲಿ ನಿಲ್ಲಿಸದೆ ಬೇರೆ ಸ್ಥಳದಲ್ಲಿ ಅಂದರೆ ಪ್ರೈವೇಟ್ ಹೋಟೆಲ್ಗಳ ಮುಂದೆ ನಿಲ್ಲಿಸುತ್ತಾರೆ ಅವರ ವಿರುದ್ಧ ಆಕ್ಷನ್ ತೆಗೆದುಕೊಂಡಿದ್ದೇವೆ. ನಾವು ಏನು ಅವರಿಗೆ ಪೆನಾಲ್ಟಿ ಹಾಕಿದ್ದೇವೆ ಆ ಹಣವನ್ನು ಅವರು ಹೋಟೆಲ್ನವರ ಕಡೆಯಿಂದ ವಸೂಲು ಮಾಡಿಕೊಳ್ಳುತ್ತಿದ್ದಾರೆ. ಇದು ನಮಗೆ ಗೊತ್ತಾಗಿದೆ. ಆ ದೃಷ್ಟಿಯಿಂದ ನಾವು ಯಾರು ಈ ರೀತಿ ಇಲ್ಲೀಗಲ್ ಆಗಿ ಮಾಡುತ್ತಿದ್ದಾರೆ, ಅಂದರೆ ಬಸ್ ಸ್ಟಾಂಡ್ನಲ್ಲಿ ಬಸ್ ನಿಲ್ಲಿಸದೆ ಬೇರೆ ಪ್ರೈವೇಟ್ ಹೋಟೆಲ್ ಬಳಿ ನಿಲ್ಲಿಸುತ್ತಾರೆ ಅವರ ವಿರುದ್ಧ ಸಸ್ಪನ್ಷನ್ ಅಥವಾ ಪ್ರಸಂಗ ಬಂದರೆ ಡಿಸ್ಮಿಸ್ ಮಾಡುವ ಕ್ರಮವನ್ನೂ ಸಹ ಕೈಗೊಳ್ಳುತ್ತೇವೆ. So, we are taking action as per rules.

ಮಲೆನಾಡು ಅಭಿವೃದ್ಧಿ ಕಾಮಗಾರಿ

20 - ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು) : ಮಾನ್ಯ ಪರಿಸರ ಮತ್ತು ಜೀವ ಪರಿಸರ ಶಾಸ್ತ್ರ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯವರು, ಲೋಕೋಪಯೋಗಿ ಇಲಾಖೆಯ ಕೆಲಸಗಳಿಗೆ ಮಂಜೂರಾತಿ ನೀಡಿದ್ದು ಲೆಕ್ಕ ಪತ್ರ ನಿರ್ವಹಣೆಯಲ್ಲಿ ಕಾನೂನಿನ

ತೊಡಕು ಉಂಟಾಗಿದೆಯೆಂದು ಕೆಲಸದ ಪ್ರಗತಿಗೆ ಅಡಚಣೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ?

ಆ) ಹಾಸನ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಯವರು ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಕೆಲಸಗಳಿಗಾಗಿ ಖರ್ಚು ಮಾಡಿರುವ ಹಣ ಎಷ್ಟು?

ಶ್ರೀ ಎನ್.ಜಿ. ಹಾಲಪ್ಪ (ಪರಿಸರ ಮತ್ತು ಜೀವ ಪರಿಸರ ಶಾಸ್ತ್ರ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು):

ಅ) ಹಾಸನ ಜಿಲ್ಲೆಯಲ್ಲಿ ಕಾರ್ಯವಿಧಾನದ ತೊಡಕುಗಳಿವೆ.

ಆ) 1.04 ಲಕ್ಷ ರೂ.ಗಳು.

ಶ್ರೀ ಎ.ಟಿ. ರಾಮಸ್ವಾಮಿ : ಸರ್ಕಾರದವರು ಮಲೆನಾಡು ಪ್ರದೇಶದ ಅಭಿವೃದ್ಧಿಗಾಗಿ ಹಣ ಬಿಡುಗಡೆ ಮಾಡಲು ಕಾನೂನಿನ ಅಡಚಣೆ ಇದೆಯೆಂದು ಒಪ್ಪಿಕೊಂಡಿದ್ದಾರೆ. ಇದರಿಂದ ಲೋಕೋಪಯೋಗಿ ಇಲಾಖೆಯ ಕೆಲಸ ಕಾರ್ಯಗಳು ಕುಂಠಿತಗೊಂಡಿದೆ ಎಂಬುದನ್ನೂ ಸಹ ಅವರು ತಮ್ಮ ಉತ್ತರದಲ್ಲಿ ಒಪ್ಪಿಕೊಂಡಿದ್ದಾರೆ. ಮಾನ್ಯ ಸಚಿವರು ನನ್ನ ಒಂದು ಪ್ರಶ್ನೆಗೆ ಉತ್ತರವನ್ನು ಕೊಡಬೇಕು. ಕಾನೂನಿಗಾಗಿ ನಾವು ಇದ್ದೇವೋ ಅಥವಾ ನಮಗಾಗಿ ಕಾನೂನು ಇದೆಯೋ. ನಮಗಾಗಿ ಕಾನೂನು ಇದ್ದರೆ ಆ ಕಾನೂನಿನ ತೊಡಕುಗಳನ್ನು ಏತಕ್ಕೆ ನಿವಾರಣೆ ಮಾಡಲಿಲ್ಲ? ನಿವಾರಣೆ ಮಾಡದೇ ಇದ್ದುದರಿಂದ ಇವತ್ತು ಆ ಪ್ರದೇಶದಲ್ಲಿ ಅಭಿವೃದ್ಧಿ ಕೆಲಸ ಕಾರ್ಯಗಳು ಕುಂಠಿತವಾಗಿಲ್ಲವೇ?

ಶ್ರೀ ಎನ್.ಜಿ. ಹಾಲಪ್ಪ : ಹಾಸನ ಜಿಲ್ಲೆಯಲ್ಲಿ ಮಾತ್ರ ಕೆಲವು ಕಾನೂನು ತೊಡಕು ಇದೆ. ಆ ವಿಚಾರದಲ್ಲಿ ಜಿಲ್ಲಾಮಟ್ಟದಲ್ಲಿ ನಮ್ಮ ಎಕ್ಸಿಕ್ಯೂಟೀವ್ ಇಂಜಿನಿಯರ್ರವರು ರೆಗ್ಯುಲರ್ ಪಿಡಬ್ಲ್ಯೂಡಿ ಅಕೌಂಟ್ಸ್ ಹಣವನ್ನು ಜಮಾ ಮಾಡಿದ್ದಾರೆ. 13-01-1994ರ ಬೋರ್ಡ್ಮೀಟಿಂಗ್ನಲ್ಲಿ ಇದರ ಬಗ್ಗೆ ಚರ್ಚೆಯಾಗಿದೆ. ಚೀಫ್ ಇಂಜಿನಿಯರ್ (ಸಿ ಅಂಡ್ ಬಿ) ರವರು ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿರವರ ಹತ್ತಿರ ಇದರ ಬಗ್ಗೆ ಸಮಾಲೋಚನೆ ಮಾಡಿದ್ದೇವೆ.

ಶ್ರೀ ಎ.ಟಿ. ರಾಮಸ್ವಾಮಿ : ಒಂದು ವರ್ಷದಿಂದ ಕೆಲಸ ಆಗದೆ ಇರುವುದನ್ನು ತಾವು ಗಮನಿಸಲಿಲ್ಲವೇ? ಈ ಮಂಡಳಿಯನ್ನು ರಚಿಸಿದ ಉದ್ದೇಶ ಸಾರ್ಥಕವಾಗಲಿಲ್ಲ ಎಂಬುದು ತಮ್ಮ ಗಮನಕ್ಕೆ ಇಷ್ಟು ದಿವಸಗಳವರೆಗೆ ಬರಲಿಲ್ಲವೇ? ಇಷ್ಟು ದಿವಸ ಸರ್ಕಾರ ಏನು ಮಾಡುತ್ತಿತ್ತು?

ಶ್ರೀ ಎನ್.ಜಿ. ಹಾಲಪ್ಪ : ಎಲ್ಓಸಿ ಕೊಡುವುದರಲ್ಲಿ ಸ್ವಲ್ಪ ತೊಂದರೆಯಾಗಿದೆ. Now we will set it right.

ಬೈಲಹೊಂಗಲ ತಾಲ್ಲೂಕಿನಲ್ಲಿ ಒಳಚರಂಡಿ ವ್ಯವಸ್ಥೆಯಿಲ್ಲದೆ ವಾಯುಮಾಲಿನ್ಯ.

67 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಪರಿಸರ ಜೀವಿ ಪರಿಸ್ಥಿತಿ ಶಾಸ್ತ್ರ ಮತ್ತು ವಿಜ್ಞಾನ ಯಂತ್ರಕಲಾ ಹಾಗೂ ಮಲೆನಾಡು ಪ್ರದೇಶ ಅಭಿವೃದ್ಧಿ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿಂದಿನ ಪರಿಸರ ಸಚಿವರು ಹೊಸದಾಗಿ ನಿರ್ಮಿಸಿದ ಪುನರ್ ವಸತಿ ಬಡಾವಣೆಗಳಾದ ಬೈಲಹೊಂಗಲ ತಾಲ್ಲೂಕಿನ ವಕ್ಕುಂಡ, ಕೊರವಿಕೊಪ್ಪ, ಬೂದಿಹಾಳ್, ಮೂಗಬಸವ ಹಾಗೂ ಸಂಗೊಳ್ಳಿ ಹಾಗೂ ಸೌದತ್ತಿ ತಾಲ್ಲೂಕಿನ ಸುತ್ತಗಟ್ಟಿ, ಇಟ್ಟಣಗಿ ಇಣಗಿ, ಮಲ್ಲೂರು, ಮಾಡೊಳ್ಳಿ, ಇಂಗಳಗಿ, ಗ್ರಾಮಗಳಲ್ಲಿ ಒಳಚರಂಡಿ ಯೋಜನೆ ಇಲ್ಲದೆ ಇರುವುದರಿಂದ ಹವೆ ದೂಷಿತವಾಗುತ್ತಿದ್ದು, ಒಳಚರಂಡಿ ಯೋಜನೆಯನ್ನು ಕೈಗೊಳ್ಳಬೇಕೆಂದು ಪರಿಸರ ಸಚಿವರು ನೀರಾವರಿ